ಶ್ರೀ ಡಿ. ಟಿ. ಜಯಕುಮಾರ್.— ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆಂಬುದನ್ನು ಹೇಳುತ್ತೀರಾ ? ಏಕೆಂದರೆ, ಅರ್ಧಂಬರ್ಧ ಕೆಲಸವಾದರೆ ನಾವು ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಹಣ ಜಾಗ್ರತೆ ಬಿಡುಗಡೆ ಮಾಡಿ ಕೆಲಸವನ್ನು ಮುಗಿಸುತ್ತೀರಾ ?

ಶ್ರೀ ಎಚ್ ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ಇಲ್ಲಿಯವರೆಗೆ ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಜನರಿಂ ನಿಮ್ಮನ್ನು ಕೇಳುವವರೆಗೂ ತಡ ಮಾಡುವುದಿಲ್ಲ. ನಿಗದಿ ಯಾವ ಕಾಲಕ್ಕೆ ನಾವು ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಘಟಪ್ರಭಾ ಮಂಖ್ಯಿ ಕಾಲಂವೆಯಂ ಲೈನಿಂಗ್ ಕಾಮಂಗಾರಿಗಳಂ

೧೯೮೮. ಶ್ರೀ ಬಿ. ಸಿ. ಜಮಖಂಡಿ.— ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೇಯಿಟ್ಟು ಉತ್ತರಿಸಂವರೆ.—

ಅ) ಘಟಪ್ರಭಾ ಮಂಖ್ಯಿ ಕಾಲಂವೆಯಂ ಉದ್ದ ಎಷ್ಟು ?

ಆ) ಮಂಖ್ಯಿ ಕಾಲುವೆಯಲ್ಲಿ ಎಷ್ಟು ಕ್ಯೂಸೆಕ್ಸ್ ಪ್ರಮಾಣದ ನೀರು ಬರುತ್ತಿದೆ ?

ಇ) ಈ ಪ್ರದೇಶದಲ್ಲಿ ಎಷ್ಟು ವಿಸ್ತೀರ್ಣದ ಭೂಮಿ ನೀರಾವರಿ ಆಗುತ್ತಿದೆ ?

ಈ) ಮುಖ್ಯ ಕಾಲುವೆಗೆ ಲೈನಿಂಗ್ ಕೆಲಸ ಮಾಡಲು ಎಷ್ಟು ಖರ್ಚು ಬರುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ೧) ಘಟಪ್ರಭಾ ಎಡದಂಡೆ ಕಾಲುವೆ — ೧೧೯ ಕಿ.ಮೀ.

೨) ಘಟಪ್ರಭಾ ಬಲದಂಡೆ ಕಾಲುವೆ — ೨೦೨ ಕಿ.ಮೀ.

ಆ) ೧) ಘಟಪ್ರಭಾ ಎಡದಂಡೆ ಕಾಲುವೆ — ಬಿಡುತ್ತಿರುವ ನೀರಿನ ಪ್ರಮಾಣ ೨೪೧೦ ಕ್ಯೂಸೆಕ್ಸ್

೨) ಘಟಪ್ರಭಾ ಬಲದಂಡೆ ಕಾಲುವೆ — ಬಿಡುತ್ತಿರುವ ನೀರಿನ ಪ್ರಮಾಣ ೧೨೮ ಕ್ಯೂಸೆಕ್

(ಒಟ್ಟು ಸಾಮರ್ಥ್ಯ. ೨೭೦೦ ಕ್ಯೂಸೆಕ್ಸ್)

ಇ) ೧೯೪೪-೪೫ನೇ ಸಾಲಿನಲ್ಲಿ ನೀರಾವರಿ ಆದ ವಿಸ್ತೀರ್ಣ ಈ ರೀತಿ ಇದೆ.
ಮುಂಗಾರು ಮತ್ತು ದ್ವಿರುತ — ೭೬,೦೧೧ ಹೆಕ್ಟೇರಂಗಳು
ಹಿಂಗಾರು — ೬೫,೭೧೩ ಹೆಕ್ಟೇರಂಗಳಂ

ಈ) ಎಡದಂಡೆ ನಾಲೆಯ ಲೈನಿಂಗ್ ಕೆಲಸಕ್ಕೆ ಒಟ್ಟು ರೂ. ೩೫೭೮ ಲಕ್ಷ ಖರ್ಚು ಬರುತ್ತದೆ.

ಶ್ರೀ ಬಿ. ಜೆ. ಜಮಖಂಡಿ.— ಇಲ್ಲಿ ೧೯೪೪-೪೫ರಲ್ಲಿ ನೀರಾವರಿಯಾದಂಥ ವಿಸ್ತೀರ್ಣವನ್ನು ಕೊಡಲಾಗಿದೆ. ಮುಖ್ಯ ಕಾಲುವೆಗಳ ಮೂಲಕ ಸುಮಾರು ೨೪೧೦ ಕ್ಯೂಸೆಕ್ಸ್ ನೀರನ್ನು ಬಿಡುತ್ತಿರುವುದರಿಂದ ಕೆಲವು ಕಡೆಗಳಲ್ಲಿ ಕಾಲುವೆ ಒಡೆದುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ನಾನು ಎಷ್ಟು ಕಿಲೋಮೀಟರ್‌ವರೆಗೆ ಲೈನಿಂಗ್ ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ, ಆದರೆ ಇಲ್ಲಿ ಇದಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ತಿಳಿಸಲಾಗಿದೆ. ಈಗ ಬಿಡುತ್ತಿರುವ ನೀರು, ಒಟ್ಟು ೧೪೧೭೪ ಹೆಕ್ಟೇರ್ ಪ್ರದೇಶಗಳಿಗೆ ಸಾಲುತ್ತಿದೆಯೇ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.— ಇಲ್ಲಿ ಲೈನಿಂಗ್ ಕೆಲಸ ಮಾಡಬೇಕಾದ್ದು ಅತಿ ಪ್ರಾಮುಖ್ಯವಾದಂಥ ವಿಷಯವಾಗಿದೆ. ಇದಕ್ಕಾಗಿ ೩೫೭೮ ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ. ಇದರಲ್ಲಿ ನಾವು ಈ ಗಾಗಲೇ ೧೦.೭೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮುಖ್ಯ ಕಾಲುವೆ ಪ್ರದೇಶದಲ್ಲಿ ೨೫ ಕಿಲೋಮೀಟರ್‌ವರೆಗೆ, ಬ್ರಾಂಚ್-ಕೆನಾಲ್ ಪ್ರದೇಶದಲ್ಲಿ ೩೬ ಕಿಲೋಮೀಟರ್ ವರೆಗೆ, ಡಿಸ್ಟ್ರಿಬ್ಯೂಟರಿ ಕೆನಾಲ್ ಪ್ರದೇಶದಲ್ಲಿ ೨೧೨ ಕಿಲೋಮೀಟರ್‌ವರೆಗೆ ಲೈನಿಂಗ್ ಕೆಲಸ ಮುಗಿದಿದೆ. ಉಳಿದ ಕೆಲಸವನ್ನು ಮುಗಿಸಲು ನಮಗೆ ಸಾಕಷ್ಟು ಬಿಡುವು ಸಿಗುತ್ತಿಲ್ಲ. ಏಕೆಂದರೆ, ನಾವು

ಬೇಸಿಗೆ ಬೆಳೆಗೂ ನೀರು ಬಿಡಬೇಕಾಗಿದೆ ಮತ್ತು ಮುಂಗಾರು ಬೆಳೆಗೂ ನೀರು ಬಿಡಬೇಕಾಗಿದೆ. ಆದ್ದರಿಂದ ಈ ಕೆಲಸ ನಿಧಾನವಾಗುತ್ತಿದೆ. ಅಲ್ಲಿನ ರೈತರು ಸಹಕಾರ ನೀಡಿದರೆ ನಾವು ಜಾಗ್ರತೆ ಈ ಲೈನಿಂಗ್ ಕೆಲಸ ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಜೆ. ಜಮಖಂಡಿ.— ಈಗ ರೈತರ ಸಹಕಾರ ತೆಗೆದುಕೊಂಡೇ ಈ ಕೆಲಸ ಮಾಡುತ್ತಿದ್ದಾರೆ. ೧೦೯ ಕಿಲೋಮೀಟರ್ ಪೈಕಿ ಕೇವಲ ೧೫ ರಿಂದ ೩೦ ಕಿಲೋಮೀಟರ್‌ವರೆಗೆ ಲೈನಿಂಗ್ ಕೆಲಸ ಮುಗಿದಿದೆ. ಇನ್ನುಳಿದ ಲೈನಿಂಗ್ ಕೆಲಸ ಮುಗಿಯದ ಕಾರಣದಿಂದ ಸುಮಾರು ೫೦೦ ಕ್ಯೂಸೆಕ್ಸ್‌ನಷ್ಟು ನೀರು ಹೊರ ಹೋಗುತ್ತಿದೆ. ಇದರಿಂದ ಆ ಭಾಗದ ಜಮೀನೆಲ್ಲಾ ಚೌಳಾಗುತ್ತಿದೆ. ಆದ್ದರಿಂದ ಲೈನಿಂಗ್ ಕೆಲಸವನ್ನು ತೀವ್ರವಾಗಿ ಮಾಡಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಲೈನಿಂಗ್ ಕೆಲಸ ಮಾಡುವುದರಲ್ಲಿ ವಿವಾದವಿಲ್ಲ. ಈ ಕೆಲಸವನ್ನು ರೈತರ ಸಹಕಾರ ತೆಗೆದುಕೊಂಡು ಮಾಡಬೇಕಾಗುತ್ತದೆ. ಬೇಸಿಗೆ ಬೆಳೆ ಮತ್ತು ಮುಂಗಾರಿನ ಬೆಳೆಗೆ ನೀರನ್ನು ಬಿಡಬೇಕಾದ ಕಾರಣದಿಂದ ನಮಗೆ ಈ ಕೆಲಸ ಮಾಡಲು ಸಾಕಷ್ಟು ಸಮಯ ಸಿಗುತ್ತಿಲ್ಲ. ಒಂದು ವರ್ಷ ರೈತರು ಬೇಸಿಗೆ ಬೆಳೆ ಬೆಳೆಯುವುದನ್ನು ನಿಲ್ಲಿಸಿದರೆ ನಾವು ಜಾಸ್ತಿ ಕೆಲಸ ಮಾಡಬಹುದು. ಇಲ್ಲದಿದ್ದರೆ ಸ್ವಲ್ಪಸ್ವಲ್ಪವೇ ಕೆಲಸ ಆಗುತ್ತದೆ. ಇದಕ್ಕೆ ಪ್ರಮುಖವಾಗಿ ಅಲ್ಲಿನ ರೈತರ ಸಹಕಾರ ಬೇಕು. ಮಾನ್ಯ ಸದಸ್ಯರು ಹೇಳಿದಂತೆ ಕಾಲುವೆ ಒಡೆದಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಒಂದುವೇಳೆ ಎಲ್ಲಿಯಾದರೂ ಆಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ನಾವು ರಿಪೇರಿ ಮಾಡಿಸುತ್ತೇವೆ.

ಅಂಗನವಾಡಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ,

೧೬೬೨. ಶ್ರೀ ಓಂಕಾರಮೂರ್ತಿ (ಕಡೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಗ್ರ ಬಾಲವಿಕಾಸ ಯೋಜನೆಯ ಅಡಿಯಲ್ಲಿ ಒಂದು ತಾಲ್ಲೂಕಿಗೆ ಒಂದುನೂರು ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಬಹುತೇಕ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಕಡೂರು ತಾಲ್ಲೂಕಿನಲ್ಲಿ ೩೦೭ ಹಳ್ಳಿಗಳಿದ್ದು ಕೇವಲ ೧೦೦ ಅಂಗನವಾಡಿಗಳು ಮಾತ್ರ ರಾಜ್ಯ ಸರ್ಕಾರದಿಂದ ನಡೆಯುತ್ತಿದ್ದು ಉಳಿದ ೨೦೭ ಗ್ರಾಮಗಳಿಗೆ ಮಂಜೂರಾಗದಿರಲು ಕಾರಣಗಳೇನು? ೧೯೮೬-೮೭ನೇ ಸಾಲಿನಲ್ಲಾದರೂ ಮಂಜೂರು ಮಾಡಲಾಗುವುದೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ವತಿಯಿಂದ ನಡಿಯುತ್ತಿರುವ ಯೋಜನೆಗಳ ಮಂಟ್ಪಿಗೆ ೩ದು ನಿಜ.

ಆ) ಕಡೂರು, ರಾಜ್ಯ ಸರ್ಕಾರದ ಯೋಜನೆಯಾಗಿದ್ದು ೧೦೦ ಅಂಗನವಾಡಿಗಳು ಮಾತ್ರ ಮಂಜೂರಾಗಿವೆ. ಈ ವರ್ಷ ಅಂಗನವಾಡಿ ವಿಸ್ತರಣಾ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಕೈಗೊಂಡಿಲ್ಲ. ಹೀಗಾಗಿ ಉಳಿದ ಹಳ್ಳಿಗಳಿಗೆ ಅಂಗನವಾಡಿಗಳನ್ನು ಮಂಜೂರು ಮಾಡಿಲ್ಲ. ಹಣದ ಅಭಾವದಿಂದಾಗಿ ರಾಜ್ಯದ ಐಸಿಡಿಎಸ್ ಯೋಜನೆಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಅಂಗನವಾಡಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಕಡೂರು ತಾಲ್ಲೂಕ್ ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಆದರೂ ಸಹ ಇಲ್ಲಿ ಕೇವಲ ನೂರು ಅಂಗನವಾಡಿಗಳು ಸಣ್ಣಸಣ್ಣ ಹಳ್ಳಿಗಳಲ್ಲಿ ಪ್ರಾರಂಭವಾಗಿವೆಯೇ ಹೊರತು ದೊಡ್ಡದೊಡ್ಡ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆದಿಲ್ಲ. ದೊಡ್ಡದೊಡ್ಡ ಹಳ್ಳಿಗಳಲ್ಲಿಯೂ ಸಹ ಸುಮಾರು ೧೪ಳ ಅಂಗನವಾಡಿಗಳನ್ನು ಪ್ರಾರಂಭ ಮಾಡಬೇಕೆಂದು ೩-೪ ವರ್ಷಗಳ ಹಿಂದೆಯೇ ಪ್ರಪೋಸಲ್‌ನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಪ್ರಾರಂಭ ಮಾಡಿಲ್ಲ. ಇದಕ್ಕೆ ಕಾರಣವೇನು? ಈ ವರ್ಷವಾದರೂ ಪ್ರಾರಂಭ ಮಾಡುತ್ತೀರಾ?

ಶ್ರೀ ವಿ.ಎಲ್. ಪಾಟೀಲ್.—ಅಂಗನವಾಡಿಗಳನ್ನು ಪ್ರಾರಂಭ ಮಾಡಬೇಕಾದರೆ ಕೆಲವು ನಿಯಮಗಳಿವೆ. ಯಾವುದೇ ಹಳ್ಳಿಯಲ್ಲಿ ಅಂಗನವಾಡಿಯನ್ನು ಪ್ರಾರಂಭ ಮಾಡಬೇಕಾದರೆ ಅದು ಹಿಂದುಳಿದ